## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1146** |
| **ಸದಸ್ಯರ ಹೆಸರು** | : | **ಶ್ರೀ ಶಶೀಲ್ ಜಿ.ನಮೋಶಿ**<br>**(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **22.09.2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಜಲಸಂಪನ್ಮೂಲ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕದ ಭಾಗದಲ್ಲಿ ನೀರಾವರಿಗಾಗಿ ಕೈಗೊಂಡ ಪ್ರಮುಖ ನೀರಾವರಿ ಯೋಜನೆಗಳಾವುವು; (ಜಿಲ್ಲೆಗಳಿಗನುಗುಣವಾಗಿ ಮಾಹಿತಿಯನ್ನು ನೀಡುವುದು) | ಮಾಹಿತಿಯನ್ನು ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ. |
| (ಆ) | ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ನೀರಾವರಿ ಯೋಜನೆಗಳ ಕಾಮಗಾರಿ ಯಾವ ಹಂತದಲ್ಲಿದೆ; (ಈ ಯೋಜನೆಗಳ ವೆಚ್ಚದ ಬಗ್ಗೆ ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ಅನುಬಂಧ-2ರಲ್ಲಿ ಸಲ್ಲಿಸಲಾಗಿದೆ. |
| ಇ) | ಯಾವ ಕಾಲಮಿತಿಯಲ್ಲಿ ಈ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು? | |

**ಜಸಂಇ 175 ಎಂಎಲ್ಎ 2022**

**(ಗೋವಿಂದ ಎಂ. ಕಾರಜೋಳ)**
ಜಲಸಂಪನ್ಮೂಲ ಸಚಿವರು

# ಅನುಬಂಧ - 1

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

### ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಪ್ರಮುಖ ನೀರಾವರಿ ಯೋಜನೆಗಳ ವಿವರ

(ರೂ.ಕೋಟಿಗಳಲ್ಲಿ)

| ಕ್ರ ಸಂ | ಯೋಜನೆ | ಅನುಮೋದಿತ ಅಂದಾಜು ಮೊತ್ತ | ಜಿಲ್ಲೆ | ಸಾಧಿಸಿದ ಪ್ರಗತಿ ಮೊತ್ತ | ಪ್ರಸ್ತುತ ಹಂತ | ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಕಾಲಮಿತಿ |
|---|---|---|---|---|---|---|
| 1 | ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ (ವಿತರಣಾ ಕಾಲುವೆಗಳ ಹಾಗೂ ಸೀಳುಗಾಲುವೆಗಳ) ಯೋಜನೆ – ಎ.ಐ.ಬಿ.ಪಿ. ಯೋಜನೆ | 2794.00 | ಯಾದಗಿರಿ ಮತ್ತು ರಾಯಚೂರು | 1233.00 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ.0.00 ದಿಂದ 95.00 ಆಧುನೀಕರಣ ಕಾಮಗಾರಿಯನ್ನು ಗುತ್ತಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 2 | ಬೂದಿಹಾಳ–ಪೀರಾಪೂರ ಏತ ನೀರಾವರಿ ಯೋಜನೆ | 840.00 | ಯಾದಗಿರಿ ಮತ್ತು ವಿಜಯಪುರ | 415.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | 2022-23 |
| 3 | ಕೊಪ್ಪಳ ಏತ ನೀರಾವರಿ ಯೋಜನೆ | 7769.46 | ಕೊಪ್ಪಳ | 2712.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | 2023-24 |
| 4 | ರಾಂಪುರ ಏತ ನೀರಾವರಿ ಯೋಜನೆ | 179.87 | ರಾಯಚೂರು | 189.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | 2022-23 |
| 5 | ಮಲ್ಲಾಬಾಧ ಏತ ನೀರಾವರಿ ಯೋಜನೆ | 578.27 | ಯಾದಗಿರಿ | 252.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | 2023-24 |
| 6 | ಭೀಮಾ ಫ್ಲಾಂಕ್ ಏತ ನೀರಾವರಿ ಯೋಜನೆ | 271.57 | ಯಾದಗಿರಿ | 12.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು | 2023-24 |

| ಕ್ರ ಸಂ | ಯೋಜನೆ | ಅನುಮೋದಿತ ಅಂದಾಜು ಮೊತ್ತ | ಜಿಲ್ಲೆ | ಸಾಧಿಸಿದ ಪ್ರಗತಿ ಮೊತ್ತ | ಪ್ರಸ್ತುತ ಹಂತ | ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಕಾಲಮಿತಿ |
|---|---|---|---|---|---|---|
| | | | | | ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | |
| 7 | ಸನ್ನತಿ ಏತ ನೀರಾವರಿ ಯೋಜನೆ | 673.90 | ಯಾದಗಿರಿ ಮತ್ತು ಕಲಬುರಗಿ | 465.00 | ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಇತ್ತಿಚೆಗೆ ಗುತ್ತಿಗೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | 2024-25 |
| 8 | ನಾರಾಯಣಪುರ ಎಡದಂಡೆ ಕಾಲುವೆಯ ಕಿ.ಮೀ. ಕಿ.ಮೀ. 42.00 ರಿಂದ 72.00 ರವರೆಗಿನ ಕಾಲುವೆ ಜಾಲದ ಆಧುನೀಕರಣ ಕಾಮಗಾರಿ. | 4233.98 | ಯಾದಗಿರಿ ಮತ್ತು ರಾಯಚುರು | 4303.00 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ.42.00 ದಿಂದ 72.00 ಆಧುನೀಕರಣ ಕಾಮಗಾರಿಯನ್ನು ಗುತ್ತಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 9 | ನಂದವಾಡಗಿ ಏತ ನೀರಾವರಿ ಯೋಜನೆ | 1530.00 | ರಾಯಚುರು | 1007.00 | ಕಾಮಗಾರಿ ಪ್ರಗತಿಯಲ್ಲಿದೆ. | 2023-24 |
| | ಒಟ್ಟು | **18871.05** | | **5350.42** | | |

ತಾಂತ್ರಿಕ ನಿರ್ದೇಶಕರು
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ,
ಬೆಂಗಳೂರು

KNIVL

# ಅನುಬಂಧ-1

## ಕಲ್ಯಾಣ ಕರ್ನಾಟಕ ಯೋಜನೆಗಳ ವಿವರಗಳು

(ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ)

| ಕ್ರಮ ಸಂ. | ಜಿಲ್ಲೆ | ಯೋಜನೆ | ಉದ್ದೇಶಿತ ನೀರಾವರಿ ಕ್ಷೇತ್ರ | ಯೋಜನೆಯ ಸ್ವರೂಪ |
|---|---|---|---|---|
| 1. | ಬಳ್ಳಾರಿ<br>ಕೊಪ್ಪಳ<br>ಗದಗ | ಸಿಂಗಟಾಲೂರು ಏತ ನೀರಾವರಿ ಯೋಜನೆ | 1,07,380 | ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ಉದ್ದೇಶಿತ ನೀರಾವರಿ ಕ್ಷೇತ್ರ 1,07,380 ಹೆಕ್ಟೇರ್‌ನಲ್ಲಿ, ಎಡಭಾಗದಲ್ಲಿ 12590 ಹೆ ಹಾಗೂ ಬಲಭಾಗದಲ್ಲ 5097 ಹೆ. ಒಟ್ಟು 19,580 ಹೆಕ್ಟೇರ್ ಪ್ರದೇಶಕ್ಕೆ ಹರಿ ನೀರಾವರಿಯನ್ನು ಕಲ್ಪಿಸಲಾಗಿದೆ. ಉಳಿದ ಪ್ರದೇಶ ಎಡಭಾಗದ ಒಟ್ಟು 87,800 ಹೆಕ್ಟೇರ್ ಭೂಪ್ರದೇಶದಲ್ಲಿ, ಪ್ರಸ್ತುತವಾಗಿ 58307 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 2. | ಬಳ್ಳಾರಿ<br>ಕೊಪ್ಪಳ<br>ರಾಯಚೂರು | ವಿಜಯನಗರ ಯೋಜನೆ | 11222 | ವಿಜಯನಗರ ಕಾಲುವೆಗಳಡಿಯಲ್ಲ 11,154 ಹೆಕ್ಟೇರ್ ಪ್ರದೇಶವಿರುತ್ತದೆ. ಒಟ್ಟಾರೆ 12 ಆಣೆಕಟ್ಟು ಮತ್ತು 16 ಕಾಲುವೆಗಳನ್ನು ಒಳಗೊಂಡಿರುತ್ತದೆ. **(ಎ.ಡಿ.ಬಿ.ಅಡಿಯಲ್ಲ)** ಒಟ್ಟು 15 ಕಾಲುವೆಗಳು ಮತ್ತು 3 ಆಣೆಕಟ್ಟುಗಳು ಒಳಗೊಂಡಿರುತ್ತದೆ. ಇದರಲ್ಲಿ ಕಾಲುವೆಯ ಉದ್ದವು 196.64 ಕಿ.ಮೀ. ಇದ್ದು, 82.64 ಕಿ.ಮೀ ಕಾಲುವೆಯ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಹಾಗೂ 1042 ಸ್ಟ್ರಕ್ಚರ್ ಕಾಮಗಾರಿಗಳಲ್ಲಿ 315 ಸ್ಟ್ರಕ್ಚರ್‌ಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 3. | ರಾಯಚೂರು, ಕೊಪ್ಪಳ, ಬಳ್ಳಾರಿ | ತುಂಗಭದ್ರಾ ಯೋಜನೆ | - | ತುಂಗಭದ್ರಾ ಯೋಜನೆಯ ಆಧುನೀಕರಣ ಕಾಮಗಾರಿಯ ಪರಿಷ್ಕೃತ ಯೋಜನಾ ವರದಿಯು ರೂ:3161.35 ಕೋಟಿಗಳಿಗೆ ಸರ್ಕಾರದಿಂದ ಆಡಳತಾತ್ಮಕ ಅನುಮೋದನೆ ನೀಡಲಾಗಿದ್ದು, ಇದರಲ್ಲಿ ತುಂಗಭದ್ರಾ ಎಡಭಾಗದ ಮುಖ್ಯ ಕಾಲುವೆ 240.06 ಕಿ.ಮೀ. ಇದ್ದು (ಟಿ.ಎಲ್.ಬಿ.ಸಿ. 226 ಕಿ.ಮೀ. ಹಾಗೂ ಎಲ್.ಬಿ.ಹೆಚ್.ಎಲ್.ಸಿ. 14.60 ಕಿಮೀ) ಇದ್ದು, ಇದರಲ್ಲಿ 148.54 ಕಿ.ಮೀ. ಆಧುನೀಕರಣ ಪೂರ್ಣಗೊಂಡಿರುತ್ತದೆ ಹಾಗೂ ವಿತರಣಾ ಕಾಲುವೆಗಳ ಉದ್ದ 2494.78 ಕಿ.ಮೀ. ಇದ್ದು, ಇದರಲ್ಲಿ 2230.75 ಕಿ.ಮೀ. ಆಧುನೀಕರಣ ಪೂರ್ಣಗೊಂಡಿರುತ್ತದೆ. ಹಾಗೂ ಇನ್ನುಳಿದ ಕಾಮಗಾರಿಗಳನ್ನು ಆಯಾ ಸಾಲಿನ ಅನುದಾನಕ್ಕನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು. |
| 4. | ಕೊಪ್ಪಳ | ಆಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆ | 2308 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಬಳಸಿ 2428 ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ. ಜಾಕ್‌ವೆಲ್ & ಪಂಪ್‌ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೇನ್- ಒಟ್ಟು 16.80 ಕಿ.ಮೀ ಇದ್ದು ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಡೆಲಿವರಿ ಚೇಂಬರ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸರಬರಾಜು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. RCC Poles out of 169, 139 poles erected. ಬೆಟಗೇರಿ ಗ್ರಾಮಸ್ಥರು ಮಾರ್ಗಮಧ್ಯದಲ್ಲಿ 3000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಬೇಡಿಕೆ ಇಟ್ಟಿದ್ದು ಸದರಿ ಕಾಮಗಾರಿಯನ್ನು ಮುಂದುವರೆಸಲು ಅಡ್ಡಿಪಡಿಸಿರುತ್ತಾರೆ. ಆದ್ದರಿಂದ ಸದರಿ ಹೆಚ್ಚುವರಿ 3000 ಎಕರೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| ಕ್ರಮ ಸಂ. | ಜಿಲ್ಲೆ | ಯೋಜನೆ | ಉದ್ದೇಶಿತ ನೀರಾವರಿ ಕ್ಷೇತ್ರ | ಯೋಜನೆಯ ಸ್ವರೂಪ |
|---|---|---|---|---|
| 5. | ಕೊಪ್ಪಳ | ಬಹದ್ದೂರ ಬಂಡಿ ಏತ ನೀರಾವರಿ ಯೋಜನೆ | 5256 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಬಳಸಿ ಕೊಪ್ಪಳ ತಾಲೂಕಿನ 5261 ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ. ಜಾಕ್‌ವೆಲ್ ಕಾಮಗಾರಿ ಪಂಪ್‌ಫ್ಲೋರ್ ವರೆಗೂ ತಲುಪಿದ್ದು, ಕಾಮಗಾಗಿ ಪ್ರಗತಿಯಲ್ಲಿರುತ್ತದೆ. ಹಾಗೂ ರೈಸಿಂಗ್ ಮೇನ್ 6.10 ಕಿ.ಮೀ. ಉದ್ದ ಇದ್ದು, 5.70 ಕಿ.ಮೀ ರೈಸಿಂಗ್‌ಮೇನ್‌ನ ಪೈಪ್‌ಗಳ ಲೇಯಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ 500 ಮೀಟರ್ ಕಾಮಗಾರಿಯನ್ನು ಕೈಗೊಳ್ಳಲು ಸ್ಥಳೀಯ ಗ್ರಾಮದ ರೈತರು ಅಡ್ಡಿಪಡಿಸಿರುತ್ತಾರೆ. ಪಂಪ್ಸ್ & ಮೋಟರ್ಸ್ ಪೂರೈಕೆಯಾಗಿದ್ದು ಅಳವಡಿಕೆ ಬಾಕಿ ಇರುತ್ತದೆ.2 ಡೆಲಿವರಿ ಚೆಂಬರ್ ಗಳ ಪೈಕಿ 1 ರ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಕಾಮಗಾರಿಯ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಅಂದಾಜು ಪಟ್ಟಿಯು ಅನುಮೊದನೆಯಾದ ನಂತರ ಕಾಮಗಾರಿಯನ್ನು ಪ್ರಾರಂಬಿಸಬೇಕಾಗಿರುತ್ತದೆ. ಇನ್‌ಟೇಕ್ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ.ಸದರಿ ಕಾಮಗಾರಿಯಲ್ಲಿ 1 ಸರ್ಜ್ ಪ್ರೊಟೇಕ್ಷನ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 6. | ಬಳ್ಳಾರಿ | ಚಿಲವಾರಬಂಡಿ ಏತ ನೀರಾವರಿ ಯೋಜನೆ | 2023.42 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಸೇರಿದ ನೀರಾವರಿ ವಂಚಿತ 5000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ.ಜಾಕ್‌ವೆಲ್ & ಪಂಪ್‌ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೇನ್– ಒಟ್ಟು 5.885 ಕಿ.ಮೀ ಇದ್ದು ಪೈಕಿ – 5.885 ಕಿ.ಮೀ ವರೆಗೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಕೆನಾಲ್‌ಗಳ ಅಗೆತ ಪೂರ್ಣಗೊಂಡಿರುತ್ತದೆ. ಮತ್ತು 29 ಕಿ.ಮೀ. ಇದ್ದು 12 ಕಿ.ಮೀ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸರಬರಾಜು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 7. | ಕೊಪ್ಪಳ | ಮುಕ್ಕುಂಪಿ ಕೆರೆ ತುಂಬಿಸುವ ಯೋಜನೆ | – | ರೈಸಿಂಗ್ ಮೇನ್ ಉದ್ದ 27.74 ಕಿ.ಮೀ ಇದ್ದು, 18.00 ಕಿಮೀ ಪೂರ್ಣಗೊಂಡಿದ್ದು, ಬಾಕಿ ಉಳಿದ 09.74 ಕಿಮೀ ಕಾಮಗಾರಿ ಯು ಪ್ರಗತಿಯಲ್ಲಿರುತ್ತದೆ.<br>ಎಂ.ಎಸ್ ಪೈಪ್ ರೈಸಿಂಗ್ ಮೇನ್ ಉದ್ದ 9.36 ಕಿ.ಮೀ ಇದ್ದು, 2.00 ಕಿಮೀ ಪೈಪ್ ಲೇಯಿಂಗ್ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>ಜಾಕ್‌ವೇಲ್ ಕಂ ಹೌಸ್‌ನ ಕಾಮಗಾರಿಯು ಪಂಪ್ ಪ್ಲೋರ್ ಲೆವೆಲ್ ವರೆಗೆ ಪೂರ್ಣಗೊಂಡಿರುತ್ತದೆ. |
| 8. | ವಿಜಯನಗರ | ಕೂಡ್ಲಿಗಿ ಕೆರೆ ತುಂಬಿಸುವ ಯೋಜನೆ (ಪ್ಯಾಕೇಜ್–1) | – | ಎಂ.ಎಸ್ ಪೈಪ್ ರೈಸಿಂಗ್ ಮೇನ್ ಉದ್ದ 68.925 ಕಿ.ಮೀ ಇದ್ದು, 58.58 ಕಿಮೀ ಲೇಯಿಂಗ್ ಪೂರ್ಣಗೊಂಡಿರುತ್ತದೆ. ಎಂ.ಎಸ್ ಪೈಪ್ ಗ್ರಾವಿಟಿ ಮೇನ್ ಉದ್ದ 29.299 ಕಿ.ಮೀ ಇದ್ದು, 28.496 ಕಿಮೀ ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ. ಹೆಚ್.ಡಿ.ಪಿ.ಇ. ಪೈಪ್ ಗ್ರಾವಿಟಿ ಮೇನ್ ಉದ್ದ 24.603 ಕಿ.ಮೀ ಇದ್ದು, 23.43 ಕಿಮೀ ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ. |
| 9. | ವಿಜಯನಗರ | ಕೂಡ್ಲಿಗಿ ಕೆರೆ ತುಂಬಿಸುವ ಯೋಜನೆ (ಪ್ಯಾಕೇಜ್–2) | – | ಎಂ.ಎಸ್ ಪೈಪ್ ರೈಸಿಂಗ್ ಮೇನ್ ಉದ್ದ 13.945 ಕಿ.ಮೀ ಇದ್ದು, 3.49 ಕಿಮೀ ಲೇಯಿಂಗ್ ಪೂರ್ಣಗೊಂಡಿರುತ್ತದೆ. ಹೆಚ್.ಡಿ.ಪಿ.ಇ. ಪೈಪ್ ರೈಸಿಂಗ್ ಮೇನ್ ಉದ್ದ 2.655 ಕಿ.ಮೀ ಇದ್ದು, ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಎಂ.ಎಸ್ ಪೈಪ್ ಗ್ರಾವಿಟಿ ಮೇನ್ ಉದ್ದ 105.630 ಕಿ.ಮೀ ಇದ್ದು, 71.05 ಕಿಮೀ ಲೇಯಿಂಗ್ ಪೂರ್ಣಗೊಂಡಿರುತ್ತದೆ. ಹೆಚ್.ಡಿ.ಪಿ.ಇ. |

| ಕ್ರಮ ಸಂ. | ಜಿಲ್ಲೆ | ಯೋಜನೆ | ಉದ್ದೇಶಿತ ನೀರಾವರಿ ಕ್ಷೇತ್ರ | ಯೋಜನೆಯ ಸ್ವರೂಪ |
|---|---|---|---|---|
| | | | | ಪೈಪ್ ಗ್ರಾವಿಟಿ ಮೇನ್ ಉದ್ದ 85.747 ಕಿ.ಮೀ ಇದ್ದು, 78.04 ಕಿಮೀ ಲೇಯಿಂಗ್ ಪೂರ್ಣಗೊಂಡಿರುತ್ತದೆ. |
| 10. | ವಿಜಯನಗರ | ಪಿ.ಕೆ.ಹಳ್ಳಿ | – | ಜಾಕ್‌ವೆಲ್ ಕಂ ಪಂಪ್ ಹೌಸ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇನ್‌ಟೇಕ್ ಕಾಲುವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ.ರೈಸಿಂಗ್ ಮೇನ್ ಒಟ್ಟು ಉದ್ದ 17.22 ಕಿ.ಮೀ. ಇದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ .Auxiliary Lift ಕಾಮಗಾರಿಯು ಪೂರ್ಣಗೊಂಡಿರುತ್ತದೆ ಹಾಗೂ ಆಜಟುತಜಡಿಥಿ ಛಿಚಿಟಥಜಡಿ ಕಾಮಗಾರಿ ಪ್ರಗತಿಯಾಗಿರುತ್ತದೆ. 17ಕೆರೆಗಳು ಹಾಗೂ 5 ಸರಣಿ ಚೆಕ್ ಡ್ಯಾಂಗಳು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.4 ಇಂಪೌಂಡಿಂಗ್ ರಿಸರ್ವಯರ್‌ಗಳು ಇದ್ದು, ಇದರಲ್ಲಿ 2 ಮತ್ತು 3 ರ ಕಾಮಗಾರಿ ಪೂರ್ಣಗೊಂಡಿರುತ್ತದೆ. 1 ಮತ್ತು 4 ರ ಕಾಮಗಾರಿಯನ್ನು ಚಾಲನೆ ಮಾಡಬೇಕಾಗಿರುತ್ತದೆ. |
| 11. | ರಾಯಚೂರು | ಗಣೇಕಲ್ ಏತ ನೀರಾವರಿ ಯೋಜನೆ | – | ಜಾಕ್‌ವೆಲ್ ಎಕ್ಸ್‌ಕವೇಷನ್ & ಫೌಂಡೇಷನ್, ಪಿ.ಸಿ.ಸಿ. ಕಾಂಕ್ರೀಟಿಂಗ್ ವರ್ಕ್ಸ್ ಪೂರ್ಣಗೊಂಡಿದ್ದು, ಜಾಕ್‌ವೆಲ್ ಪಿಯರ್ಸ್, ಸೈಡ್ ವಾಲ್ಸ್ & ಬ್ರಸ್ಟ್ 7.00 ಮೀಟರ್ ಉದ್ದದವರೆಗೆ ಬಾರ್‌ಬೆಂಡಿಂಗ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪೈಪ್ ಫ್ಯಾಬ್ರಿಕೇಷನ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. Pumps & Motor- ಡಿಜೈನ್ & ಮ್ಯಾನುಪ್ಯಾಕ್ಚರಿಂಗ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. Intake Canal / fore bay –ಎಕ್ಸ್‌ಕವೇಷನ್ ಕಾಮಗಾರಿ, ಪಿ.ಸಿ.ಸಿ. ರ್‍ಯಾಪ್ಟ್ ಪೂರ್ಣಗೊಂಡಿರುತ್ತದೆ. |
| 12. | ಕಲಬುರ್ಗಿ | ಭೀಮಾ ಏತ ನೀರಾವರಿ ಯೋಜನೆ ಅಡಿಯಲ್ಲಿ ಬರುವ ಬೋರಿ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ 10 ಕೆರೆಗಳು ಹಾಗೂ ಆಳಂದ ತಾಲ್ಲೂಕಿನ 3 ಕೆರೆಗಳು ಸಹಿತ ಅಮರ್ಜಾ ಜಲಾಶಯ ತುಂಬಿಸುವ ಯೋಜನೆ | – | ಬೋರಿ ನದಿಯಿಂದ ಪ್ರವಾಹ ಬಂದಾಗ ಸುಮಾರು 1.00 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡಿ ಅಫಜಲಪೂರ ತಾಲ್ಲೂಕಿನ ಅಫಜಲಘೂರ ಕೆರೆ, ದಿಕ್ಸಂಗ ಕೆರೆ, ನಂದರಗಾ ಕೆರೆ, ಬಳ್ಳೂರಗಿಯ 2 ಕೆರೆ, ಚಿಂಚೋಳಿಯ ಕೆರೆ, ಬಡದ್ಧಾಳನ 2 ಕೆರೆ ಹಾಗೂ ಬೈರಾಮಡಗಿ ಕೆರೆ ಮತ್ತು ಆಳಂದ ತಾಲ್ಲೂಕಿನ ಎಳಸಂಗಿ ಕೆರೆ, ಮಾಡ್ಯಾಳ 2 ಕೆರೆ ಸಹಿತ ಅಮರ್ಜಾ ಜಲಾಶಯಕ್ಕೆ ತುಂಬಿಸಲಾಗುವುದು ಈ ಯೋಜನೆಯಲ್ಲಿ ಬೋರಿ ನದಿಯಿಂದ ನೀರನ್ನು ಎತ್ತಿ ಜಾಕ್ ವೆಲ್‌ನ ಪಂಪಹೌಸನಲ್ಲಿ ಐದು 3050 ಹೆಚ್.ಪಿ.ಯ ಪಂಪಗಳ ಮುಖಾಂತರ 34.5 ಕಿ.ಮೀ.ರವರೆಗೆ ನೀರನ್ನು 1850 ಎಮ್.ಎಮ್. ಡಯಾ. ರೈಸಿಂಗ್ ಮೇನ್ ಮುಖಾಂತರ ಸುಮಾರು 117.00ಮಿ. ಸ್ಟೇಟಿಕ್ ಹೆಡ್ ವರೆಗು ನೀರನ್ನು ಡೆಲಿವರಿ ಚಾಂಬರಗೆ ಕಳುಹಿಸಲಾಗುವುದು ಮತ್ತು ಡೆಲಿವರಿ ಚಾಂಬರ್‌ನಿಂದ ಸುಮಾರು 8.50ಕಿ.ಮೀ. ವರೆಗೆ ಗ್ರಾವಿಟಿ ಮೇನ್ ಮುಖಾಂತರ ನೀರನ್ನು ಅಮರ್ಜಾ ಜಲಾಶಯಕ್ಕೆ ತುಂಬಿಸಲಾಗುವುದು. ಈ ಯೋಜನೆಯಲ್ಲಿ ಸುಮಾರು 0.90 ಟಿ.ಎಂ.ಸಿ. ನೀರು ಅಮರ್ಜಾ ಜಲಾಶಯ ಮಿಸಲಿಟ್ಟು ಉಳಿದ 0.10 ಟಿ.ಎಂ.ಸಿ.ನಲ್ಲಿ ಅಫಜಲಘೂರ ತಾಲ್ಲೂಕಿನ 10 ಕೆರೆಗಳು ಹಾಗೂ ಆಳಂದ ತಾಲ್ಲೂಕಿನ 3 ಕೆರೆಗಳು ತುಂಬಿಸಲಾಗುವುದು.<br>ಸದರಿ ಕಾಮಗಾರಿಯ ಜಾಕವೆಲ್ / ಪಂಪ್ ಹೌಸ್ ಬಳ್ಳೂಂಡಗಿ ಗ್ರಾಮದ ಹತ್ತಿರ ಬೋರಿ ನದಿಯ ದಡದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| ಕ್ರಮ ಸಂ. | ಜಿಲ್ಲೆ | ಯೋಜನೆ | ಉದ್ದೇಶಿತ ನೀರಾವರಿ ಕ್ಷೇತ್ರ | ಯೋಜನೆಯ ಸ್ವರೂಪ |
|---|---|---|---|---|
| 13. | ಕಲಬುರ್ಗಿ | ಬಂದರವಾಡ ಮತ್ತು ಮಣ್ಣೂರ್ ಏತ ನೀರಾವರಿ ಯೋಜನೆ ಅಡಿಯಲ್ಲಿ ಬರುವ ಭೀಮಾ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ ಬಂದರವಾಡ ಲಿಫ್ಟಿನ 3 ಕೆರೆಗಳು ಹಾಗೂ ಮಣ್ಣೂರ್ ಲಿಫ್ಟಿನ 4 ಕೆರೆಗಳು ತುಂಬಿಸುವ ಯೋಜನೆ | | ಭೀಮಾ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ 7 ಕೆರೆಗಳು ಹಾಗೂ ತುಂಬಿಸುವ ಯೋಜನೆಯಾಗಿದ್ದು, ಸದರಿ ಕಾಮಗಾರಿಯ ಜಾಕವೆಲ್ / ಪಂಪ್ ಹೌಸ್ ಬಂದರವಾಡ ಹಾಗೂ ಮಣ್ಣೂರ್ ಗ್ರಾಮದ ಹತ್ತಿರ ಭೀಮಾ ನದಿಯ ದಂಡದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>**i) ಬಂದರವಾಡ ಏತ ನೀರಾವರಿ ಯೋಜನೆ:**<br>ಬಂದರವಾಡ ಗ್ರಾಮದ ಹತ್ತಿರ ಭೀಮಾ ನದಿಯಿಂದ 112.493 Mcf ನೀರನ್ನು ಎತ್ತಿ ಅಫಜಲಪುರ ತಾಲೂಕಿನ ಗೊಬ್ಬೂರ ಕೆರೆ, ಬಿದನೂರ ಕೆರೆ ಮತ್ತು ಮೇಲಕುಂದ ಕೆರೆಗಳನ್ನು ಎತ್ತಿ ಅಫಜಲಪುರ ಹೀಗೆ ಒಟ್ಟು ಮೂರು ಕೆರೆಗಳನ್ನು ತುಂಬಿಸುವ ಯೋಜನೆಯಾಗಿರುತ್ತದೆ.<br>**ii) ಮಣ್ಣೂರ್ ಏತ ನೀರಾವರಿ ಯೋಜನೆ:**<br>**ಮಣ್ಣೂರ್** ಗ್ರಾಮದ ಹತ್ತಿರ ಭೀಮಾ ನದಿಯಿಂದ 15.95 Mcf ನೀರನ್ನು ಎತ್ತಿ ಅಫಜಲಪುರ ತಾಲೂಕಿನ ಮಾಶ್ಯಾಳ ಮತ್ತು ಕರಜಗಿ ಕೆರೆಗಳನ್ನು ಎತ್ತಿ ಅಫಜಲಪುರ ಹೀಗೆ ಒಟ್ಟು ನಾಲ್ಕು ಕೆರೆಗಳನ್ನು ತುಂಬಿಸುವ ಯೋಜನೆಯಾಗಿರುತ್ತದೆ. |
| 14. | ಬೀದರ್ | ಮೇಲ್ದಂಡೆ ಮುಲ್ಲಾಮಾರಿ ಯೋಜನೆ | 3279 | ಮುಲ್ಲಾಮಾರಿ ಮೇಲ್ದಂಡೆ ನೀರಾವರಿ ಯೋಜನೆಯು ಮಧ್ಯಮ ನೀರಾವರಿ ಯೋಜನೆಯಾಗಿದ್ದು, ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಖೇರ್ಡಾ(ಬಿ) ಗ್ರಾಮದ ಹತ್ತಿರ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಆಣೆಕಟ್ಟು ಕಾಮಗಾರಿಯನ್ನು 1979-80 ರಲ್ಲಿ ಪ್ರಾರಂಭಿಸಿ 1985 ರಲ್ಲಿ ಪೂರ್ಣಗೊಳಿಸಿ ಜಲಾಶಯದಲ್ಲಿ ನೀರು ಸಂಗ್ರಹಿಸಲಾಗುತ್ತಿದೆ. ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಆಣೆಕಟ್ಟು ಮತ್ತು ತತ್ಸಂಬದ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಲದಂಡೆ ಕಾಲುವೆ ಉದ್ದ 42.80 ಕಿ.ಮೀ. ಮತ್ತು ಎಡದಂಡೆ ಕಾಲುವೆ ಉದ್ದ 25.00 ಕಿ.ಮೀ. ಇದ್ದು, ಒಟ್ಟು 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಹೊಂದಿದ್ದು, 1985 ರಲ್ಲಿ ಕಾಮಗಾರಿ ಪೂರ್ಣಗೊಂಡಿದೆ.<br>ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಎಡದಂಡೆ ಕಾಲುವೆ 0.00 ರಿಂದ 28.00 ಮತ್ತು ಬಲದಂಡೆ ಕಾಲುವೆ 0.00 ದಿಂದ 42.00 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯು ಭೌತಿಗವಾಗಿ ಮುತ್ತಾಯಗೋಡಿದೆ. |
| 15. | ಕಲಬುರ್ಗಿ | ಕೆಳದಂಡೆ ಮುಲ್ಲಾಮಾರಿ ಯೋಜನೆಯ | 9713 | ಕೆಳದಂಡೆ ಮುಲ್ಲಾಮಾರಿ ಯೋಜನೆಯನ್ನು ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ನಾಗರಾಳ ಹತ್ತಿರ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿ 9713 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೃಷ್ಟಿಸುವ ಗುರಿಯೊಂದಿಗೆ **1973-74 ರಲ್ಲಿ ಬರಗಾಲ ಪರಿಹಾರ ಕಾಮಗಾರಿ** ಎಂದು ಪ್ರಾರಂಬಿಸಲಾಯಿತು. ಆಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಪೂರ್ಣಗೊಂಡಿದ್ದು, 2001 ರಿಂದ ನೀರನ್ನು ಜಲಾಶಯದಲ್ಲಿ ಸಂಗ್ರಹಣೆ ಮಾಡಲಾಗಿದೆ. ಸದರಿ ಯೋಜನೆಯ ಕಾಲುವೆ ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. |

| ಕ್ರಮ ಸಂ. | ಜಿಲ್ಲೆ | ಯೋಜನೆ | ಉದ್ದೇಶಿತ ನೀರಾವರಿ ಕ್ಷೇತ್ರ | ಯೋಜನೆಯ ಸ್ವರೂಪ |
|---|---|---|---|---|
| 16. | ಬೀದರ್ | ಕಾರಂಜ | 29227 | ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯಲ್ಲಿರುವ ಒಂದು ಬೃಹತ್ ನೀರಾವರಿ ಯೋಜನೆ ಆಗಿರುತ್ತದೆ. ಈ ಯೋಜನೆಯನ್ನು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಕಾರಂಜಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಈ ಯೋಜನೆಗೆ 9.27 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಬೀದರ ಜಿಲ್ಲೆಯ ಭಾಲ್ಕಿ, ಬೀದರ ಹಾಗೂ ಹುಮನಾಬಾದ ತಾಲ್ಲೂಕಿನ ಒಟ್ಟು 29227 ಹೆಕ್ಟೇರ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಇದಲ್ಲದೆ, ಜಿಲ್ಲೆಯ ವಿವಿಧ ಕುಡಿಯುವ ನೀರಿನ ಯೋಜನೆಗಳಾದ (ಅ) ಬೀದರ ಪಟ್ಟಣಕ್ಕಾಗಿ 0.387 ಟಿ.ಎಂ.ಸಿ., (ಆ) ಹುಮನಾಬಾದ–ಚಿಟಗುಪ್ಪಾ ಪಟ್ಟಣ ಒಳಗೊಂಡಂತೆ ಮಾರ್ಗ ಮಧ್ಯದ 10 ಹಳ್ಳಿಗಳ ಕುಡಿಯುವ ನೀರಿನ ಯೋಜನೆಗಾಗಿ 0.300 ಟಿ.ಎಂ.ಸಿ., ಹಾಗೂ (ಇ) ಬೀದರ ತಾಲ್ಲೂಕಿನ 14 ಗ್ರಾಮಗಳ ಕುಡಿಯುವ ನೀರಿನ ಯೋಜನೆಗಾಗಿ 0.0146 ಟಿ.ಎಂ.ಸಿ., ಮತ್ತು (ಈ) ಹುಮನಾಬಾದ ತಾಲ್ಲೂಕಿನ 5 ಗ್ರಾಮಗಳ ಕುಡಿಯುವ ನೀರಿನ ಯೋಜನೆಗಾಗಿ 0.0037 ಟಿ.ಎಂ.ಸಿ. ಹೀಗೆ ಒಟ್ಟು 0.7053 ಟಿ.ಎಂ.ಸಿ. ನೀರು ಹಂಚಿಕೆ ಮಾಡಲಾಗಿದೆ. 1989 ರಿಂದ ಜಲಾಶಯದಲ್ಲಿ ನೀರು ಸಂಗ್ರಹಿಸಲಾಗುತ್ತಿದೆ.<br><br>ಸದರಿ ಯೋಜನೆಯ ಬಲದಂಡೆ 0.00 ರಿಂದ 100.00 ಕಿಮೀ ಆಧುನೀಕರಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಎಡದಂಡೆ ಆಧುನೀಕರಣ ಮತ್ತು ಕಾರಂಜ ಏತ ನೀರಾವರಿ ಯೋಜನೆ ಪ್ರಗತಿಯಲ್ಲಿರುತ್ತದೆ. |
| 17. | ಯಾದಗಿರಿ | ಹತ್ತಿಕುಣಿ ಯೋಜನೆ | 2145 | ಸದರಿ ಯೋಜನೆಯಿಂದ ಒಟ್ಟು 2145 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. 1973ರಿಂದ ನೀರಾವರಿ ಸೌಲಭ್ಯ ಕಲ್ಪಿಸಲು ಪ್ರಾರಂಭಿಸಲಾಗಿದೆ. ಈ ಯೋಜನೆಯ ಎಡದಂಡೆ ಕಾಲುವೆಯ ಉದ್ದ 14 ಕಿ.ಮೀ. ಉದ್ದವಿದ್ದು, ಇದರಲ್ಲಿ ಕಾಲುವೆಯ ಲೈನಿಂಗ ಬಹಳಷ್ಟು ರೀಚ್‌ಗಳಲ್ಲಿ ಹಾಳಾಗಿದ್ದು, ಇದರಿಂದ ಕಾಲುವೆಯ ಭಾಗವು ಅವ್ಯವಸ್ಥಿತವಾಗಿರುವುದರಿಂದ, ಬಹಳಷ್ಟು ರೀಚ್‌ಗಳಲ್ಲಿ ಸೋರಿಕೆ ಕಂಡುಬಂದಿರುತ್ತದೆ. ಇದರಿಂದ, ಉಪಕಾಲುವೆಗಳ ಕೊನೆಯ ಭಾಗದವರೆಗೆ ನೀರು ತಲುಪುತ್ತಿಲ್ಲ. ಒಟ್ಟು 2145 ಹೆಕ್ಟೇರ್ ಪ್ರದೇಶದ ಅಚ್ಚುಕಟ್ಟು ಪ್ರದೇಶದಲ್ಲಿ ಕೇವಲ 1189 ಹೆಕ್ಟೇರ್ಸ್ ಪ್ರದೇಶಕ್ಕೆ ನೀರಾವರಿ ಲಾಭ ಪಡೆಯಲಾಗುತ್ತಿದೆ. ಆಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಪೂರ್ಣಗೊಂಡಿದ್ದು, ಜಲಾಶಯದಲ್ಲಿ 1973 ರಿಂದ ನೀರನ್ನು ಸಂಗ್ರಹಿಸಲಾಗಿದೆ. |

| | | | | |
|---|---|---|---|---|
| 18. | ಯಾದಗಿರಿ | ಸೌದಾಗರ ಯೋಜನೆ | 1417 | ಸದರಿ ಯೋಜನೆಯ ಮಣ್ಣಿನ ಏರಿಯ ಉದ್ದ 600 ಮೀ.ಗಳಾಗಿದೆ. 1987ರಲ್ಲಿ ಪೂರ್ಣಗೊಳಿಸಲಾಗಿದೆ. ಸ್ಪಿಲ್‌ವೇ 60 ಮೀ ಉದ್ದವಿದ್ದು ಫ್ಲಷ್ ಎಸ್ಕೇಪ್, ಅನ್‌ಗೇಟೆಡ್ ಒಗಿ ವಿಯರ್ ಗಳನ್ನು ಹೊಂದಿದೆ. ಸ್ಪಿಲ್‌ವೇ ಯನ್ನು 218.06 ಕ್ಯೂಮೆಕ್ಸ್ (7700 ಕ್ಯೂಸೆಕ್ಸ್) ಗಳಿಗೆ ವಿನ್ಯಾಸಗೊಳಿಸಲಾಗಿದೆ. ಜಲಾಶಯದಲ್ಲಿ 1987 ಯಿಂದ ನೀರನ್ನು ಶೇಖರಿಸಲಾಗುತ್ತಿದೆ. ಬಲದಂಡೆ ಕಾಲುವೆಯ ಉದ್ದ 11 ಕಿ.ಮೀ.ಗಳಾಗಿದ್ದು ಕಾಮಗಾರಿ ಪೂರ್ಣಗೊಂಡಿದೆ. ಕಾಲುವೆಯ ಸಾಮರ್ಥ್ಯ 0.73 ಕ್ಯೂಮೆಕ್ಸ್ (26 ಕ್ಯೂಸೆಕ್ಸ್). ಆಗಿದ್ದು, ಯೋಜನೆಯ ಯೋಜಿತ ಅಚ್ಚುಕಟ್ಟು 1417 ಹೆ. ಗಳಾಗಿದೆ. ಕಾಲುವೆಯು ಹಲವು ಭಾಗಗಳಲ್ಲಿ ಹಾನಿಗೊಳಗಾಗಿದೆ. ಆದ್ದರಿಂದ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿವೆ. |
| 19. | ಬೀದರ್ | ಚುಳಕಿನಾಲಾ ನೀರಾವರಿ ಯೋಜನೆಯ | 4047 | ಯೋಜನೆಯಿಂದ ಬಸವಕಲ್ಯಾಣ ತಾಲ್ಲೂಕಿನ 810 ಹೆಕ್ಟೇರ ಮತ್ತು ಭಾಲ್ಕಿ ತಾಲೂಕಿನ 3237 ಹೆಕ್ಟೇರ್ ಸೇರಿ ಒಟ್ಟು ಸುಮಾರು 4047 ಹೆಕ್ಟೇರ್ ಭೂಮಿಗೆ ನೀರುಣಿಸಲು ಉದ್ದೇಶಿಸಲಾಗಿರುತ್ತದೆ. ಈ ಯೋಜನೆಯ ಆಣೆಕಟ್ಟು ಮತ್ತು ತತ್ಸಂಬದ್ಧ ಕಾಮಗಾರಿಗಳು ನಿರ್ಮಾಣಗೊಂಡಿರುತ್ತವೆ. 2001 ರಿಂದ ಜಲಾಶಯದಲ್ಲಿ ನೀರು ಶೇಖರಿಸಲಾಗಿದೆ. ಬಲದಂಡೆ ಕಾಲುವೆಯು 26.64ಕಿ.ಮೀ ಉದ್ದವನ್ನು ಮತ್ತು ಎಡದಂಡೆ ಕಾಲುವೆಯು 25.41 ಕಿ.ಮೀ ಉದ್ದವನ್ನು ಹೊಂದಿದ್ದು ಇವುಗಳ ಕಾಮಗಾರಿಗಳು ಪೂರ್ಣಗೊಂಡಿವೆ. ಈವರೆಗೆ 4047 ಹೆಕ್ಟೇರಗಳಷ್ಟು ಅಂದರೆ ನಿಗದಿತ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲಾಗಿದೆ. |
| 20. | ಕಲಬುರ್ಗಿ | ಚಂದ್ರಂಪಳ್ಳಿ ನೀರಾವರಿ ಯೋಜನ | 5223 | ಚಂದ್ರಂಪಳ್ಳಿ ನೀರಾವರಿ ಯೋಜನೆ ಅಡಿಯಲ್ಲಿ ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಗ್ರಾಮದ ಹತ್ತಿರ ಸರನಾಲಾ ಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಿಸಿ, ಚಿಂಚೋಳಿ ತಾಲ್ಲೂಕಿನ 5223 ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. ಆಣೆಕಟ್ಟಿನಲ್ಲಿ 1973 ರಿಂದ ನೀರನ್ನು ಸಂಗ್ರಹಿಸಲಾಗಿದೆ. ಎಡದಂಡೆ ಕಾಲುವೆ 21 ಕಿ.ಮೀ. ಉದ್ದ ಮತ್ತು ಬಲದಂಡೆ ಕಾಲುವೆ 14 ಕಿ.ಮೀ. ಉದ್ದವಿದ್ದು, ಇದರಡಿಯಲ್ಲಿ ಅನುಕ್ರಮವಾಗಿ 3482 ಹೆ ಮತ್ತು 1741 ಹೆ, ಹೀಗೆ ಒಟ್ಟು 5223 ಹೆ ನೀರಾವರಿ ಕ್ಷೇತ್ರ ಒಳಪಡುತ್ತದೆ. 1973 ರಿಂದ ಕಾಲುವೆ ಜಾಲದಲ್ಲಿ ನೀರು ಬಿಡಲಾಗುತ್ತಿದ್ದು, ನೀರಾವರಿ ಸೌಲಭ್ಯ ಒದಗಿಸಲಾಗಿದೆ |
| 21. | ಕಲಬುರ್ಗಿ | ಭೀಮಾ ಏತ ನೀರಾವರಿ ಯೋಜನೆ. | 24292 | ಬ್ಯಾರೇಜ:ಬ್ಯಾರೇಜ ಮತ್ತು ತತ್ಸಂಬಂಧ ಕಾಮಗಾರಿಗಳು ಪೂರ್ಣಗೊಂಡಿದ್ದು, 2010 ರಿಂದ ನೀರನ್ನು ಜಲಾಶಯದಲ್ಲಿ ಸಂಗ್ರಹ ಮಾಡಲಾಗುತ್ತಿದೆ.<br>ಹೆಡ್ ವರ್ಕ್ಸ:ಬಳುಂಡಗಿ ಹಾಗೂ ಅಳ್ಳಗಿ(ಬಿ) ಲಿಫ್ಟಗಳ ಕೆಲಸವು ಪೂರ್ಣಗೊಂಡತ್ತಿದ್ದು, ವಿದ್ಯುತ್ ಸಂಪರ್ಕ ಸಹಿತ ಕಾಮಗಾರಿ ಪೂರ್ಣಗೊಂಡಿದೆ.<br>➢ ಮುಖ್ಯಕಾಲುವೆ : ಬಳ್ಳುಂಡಗಿ ಮುಖ್ಯ ಕಾಲುವೆ: ಭೀಮಾ ಲಿಫ್ಟಿನ ಬಳ್ಳುಂಡಗಿ ಮುಖ್ಯ ಕಾಲುವೆಯು 63.76 ಕಿ.ಮೀ. ಉದ್ದವಿದ್ದು. ಅದರ ನಿರ್ಮಾಣದ ಕಾಮಗಾರಿಯನ್ನು ಪೂರ್ಣಗೊಂಡಿದೆ. ಈ ಕಾಲುವೆಯಲ್ಲಿ ಪ್ರಾಯೋಗಿಕವಾಗಿ ಕಿ.ಮೀ.63.76(ಅಂತ್ಯ) ರವರೆಗೆ ನೀರು ಹರಿಸಲಾಗಿದೆ.<br>➢ ಘತ್ತರಗಾ ಶಾಖಾ ಕಾಲುವೆ: ಈ ಕಾಲುವೆ ಹಾಗೂ ಸಂಭಂಗಿಸಿದ 9 ವಿತರಣಾ |

| | | | | |
|---|---|---|---|---|
| | | | | ಕಾಲುವೆಗಳಿವೆ. ಈ ಪೈಕಿ ಘತ್ತರಗಾ ಶಾಖೆ ಕಾಲುವೆ ಸಹಿತ 8 ವಿತರಣಾ ಕಾಲುವೆಗಳ ಕಾಮಗಾರಿ ಪೂರ್ಣಗೊಂಡಿವೆ ಹಾಗೂ ಉಳಿದ 1 ವಿತರಣಾ ಕಾಲುವೆ, ಹಾಗು 3 ಪರಿವರ್ತಿತ ನೇರ ತೂಬು ಕಾಲುವೆಗಳ ನಿರ್ಮಾಣವು ಪ್ರಗತಿಯಲ್ಲಿದ.<br>➢ ಅಳ್ಳಗಿ(ಬಿ) ಮುಖ್ಯ ಕಾಲುವೆ:ಭೀಮಾ ಲಿಫ್ಟಿನ ಅಳ್ಳಗಿ(ಬಿ) ಮುಖ್ಯ ಕಾಲುವೆಯು 35.787 ಕಿ.ಮೀ. ಉದ್ದವಿದ್ದು. ಈ ಪೈಕಿ 0 ರಿಂದ 20.00ಕಿ.ಮೀ ವರೆಗಿನ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮುಂದುವರೆದು 20.00 ರಿಂದ 35.787 ಕಿ.ಮೀ. ವರೆಗಿನ ಭಾಕಿ ಉಳಿದ ಕಾಮಗಾರಿ ಟೆಂಡರ ಪ್ರಕ್ರೀಯೆಯಲ್ಲಿರುತ್ತದೆ. |
| 22. | ಕಲಬುರ್ಗಿ | ಬೆಣ್ಣೆತೋರಾ ಯೋಜನೆಯ | 20234 | ಬೆಣ್ಣೆತೋರಾ ಯೋಜನೆಯನ್ನು ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಹೇರೂರ (ಕೆ) ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿ, 20,234 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.<br>ಮುಖ್ಯ ಕಾಲುವೆ:<br>• ಬಲದಂಡೆ ಕಾಲುವೆ: ಬೆಣ್ಣೆತೋರಾ ಬಲದಂಡೆ ಕಾಲುವೆಯು 82 ಕಿ.ಮೀ. ಉದ್ದವಿದ್ದು. ಅದರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಆದಾಗ್ಯೂ ಕಾಲುವೆ ಸಧೃಡಗೊಳಿಸುವ ಕಾಮಗಾರಿಯು ಮುಗಿಯುವ ಹಂತದಲ್ಲಿದೆ.<br>• ಎಡದಂಡೆ ಕಾಲುವೆ: ಬೆಣ್ಣೆತೋರಾ ಎಡದಂಡೆ ಕಾಲುವೆಯು 60 ಕಿ.ಮೀ. ಉದ್ದವಿದ್ದು. ಅದರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಆದರೆ ಕಾಲುವೆ ಸಧೃಡಗೊಳಿಸುವ ಕಾಮಗಾರಿಯು ಮುಗಿಯುವ ಹಂತದಲ್ಲಿದೆ.<br>ವಿತರಣಾ ಕಾಲುವೆ:<br>• ಬಲದಂಡೆ ವಿತರಣಾ ಕಾಲುವೆ: ಒಟ್ಟು 39 ವಿತರಣಾ ಕಾಲುವೆ ಮತ್ತು 32 ಡಿ.ಪಿ.ಓ. ಗಳು ಇದ್ದು, ಕಾಮಗಾರಿಗಳು ಪೂರ್ಣಗೊಂಡಿವೆ,<br>• ಎಡದಂಡೆ ವಿತರಣಾ ಕಾಲುವೆ: ಒಟ್ಟು 30 ವಿತರಣಾ ಕಾಲುವೆ ಮತ್ತು 31 ಡಿ.ಪಿ.ಓ. ಗಳು ಇದ್ದು ಕಾಮಗಾರಿಗಳು ಪೂರ್ಣಗೊಂಡಿವೆ. |
| 23. | ಕಲಬುರ್ಗಿ | ಅಮರ್ಜಾ | 8903 | ಅಮರ್ಜಾ ಯೋಜನೆಯು ಕಲಬುರ್ಗಿ ಜಿಲ್ಲೆಯ 8903 ಹೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿರುತ್ತದೆ. ಆಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಪೂರ್ಣಗೊಂಡಿದ್ದು, 2001 ರಿಂದ ನೀರನ್ನು ಜಲಾಶಯದಲ್ಲಿ ಸಂಗ್ರಹಣೆ ಮಾಡಲಾಗಿದೆ. ಅಮರ್ಜಾ ಬಲದಂಡೆ ಕಾಲುವೆಯು 42.480 ಕಿ.ಮೀ. ಹಾಗೂ ಎಡದಂಡೆ ಕಾಲುವೆ 0.0 ರಿಂದ30.00 ಕಿ.ಮೀ ಉದ್ದವಿರುತ್ತದೆ. |
| 24. | ಕಲಬುರ್ಗಿ | ಗಂಡೋರಿನಾಲಾ ಯೋಜನೆ | 7943 | ಕಲಬುರಗಿ ತಾಲ್ಲೂಕಿನ ಬೆಳಕೋಟಾ ಗ್ರಾಮದ ಹತ್ತಿರ ಗಂಡೋರಿನಾಲಾ ಆಣೆಕಟ್ಟು ನಿರ್ಮಿಸಿ ಬರಪೀಡಿತ ಕಲಬುರಗಿ ಜಿಲ್ಲೆಯಲ್ಲಿನ ಕಲಬುರಗಿ (3624 ಹೆ), ಚಿತ್ತಾಪುರ (3369 ಹೆ) ಹಾಗೂ ಚಿಂಚೋಳಿ (950 ಹೆ) ತಾಲ್ಲೂಕಿನ ಒಟ್ಟು 7943 ಹೆ ಪ್ರದೇಶಕ್ಕೆ 1.99 ಟಿ.ಎಂ.ಸಿ. ನೀರನ್ನು ಬಳಸಿ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.<br>ಬಲದಂಡೆ ಕಾಲುವೆ:- ಈ ಕಾಲುವೆಯು 7.00 ಕಿ.ಮೀ. ಉದ್ದವಿದ್ದು. ಅದರ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ. |

| | | | | |
|---|---|---|---|---|
| | | | | ಎಡದಂಡೆ ಕಾಲುವೆ: ಈ ಕಾಲುವೆಯು 89.32 ಕಿ.ಮೀ. ಉದ್ದವಿದ್ದು. ಅದರ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ.<br>ಗಂಡೋರಿನಾಲಾ ಯೋಜನೆಯ ಬಲದಂಡೆ ಕಾಲುವೆ 0.00 ದಿಂದ 7.00 ಕಿ.ಮೀ ಹಾಗೂ ಎಡದಂಡೆ ಕಾಲುವೆಯ ಒಟ್ಟು ಉದ್ದ 89.32 ಕಿ.ಮೀ. ನಲ್ಲಿ 0 ರಿಂದ 60 ಕಿ.ಮೀ ವರೆಗೆ ಅಧುನೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. |
| 25. | ಬೀದರ್ | ಕೊಂಗಳ ಕೆರೆ ತುಂಬಿಸುವ ಯೋಜನೆ | 15256 | ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಜಮಖಂಡಿ ಗ್ರಾಮದ ಬಳಿ ಮಾಂಜ್ರ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕೊಂಗಳಿ ಬ್ಯಾರೇಜ್‌ನಿಂದ 1.12 ಟಿಎಂಸಿ ನೀರನ್ನು ಎತ್ತಿ ಚುಳಕಿನಾಲಾ ಮತ್ತು ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳನ್ನು ತುಂಬಿಸುವ ಯೋಜನೆ ಮತ್ತು 2.169 ಟಿಎಂಸಿ ನೀರನ್ನು ಎತ್ತಿ ಕಾರಂಜಾ ಬಲದಂಡೆ ಕಾಲುವೆ ಕಿ.ಮೀ.60ರಲ್ಲಿ ಮತ್ತು ಕಿ.ಮೀ.90ರಲ್ಲಿ 15256ಹೇ. ಬಾಧಿತ ಅಚ್ಚುಕಟ್ಟು ಸ್ಥಿರೀಕರಿಸಲು ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿದೆ. |

******

ವ್ಯವಸ್ಥಾಪಕ ನಿರ್ದೇಶಕರು ಪರವಾಗಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ಬೆಂಗಳೂರು

# ಅನುಬಂಧ-2

| ಕ್ರಮ ಸಂ. | ಜಿಲ್ಲೆ | ಯೋಜನೆ | ಪ್ರಸ್ತುತ ಹಂತ |
|---|---|---|---|
| 26. | ಕಲಬುರ್ಗಿ | ಭೀಮಾ ಏತ ನೀರಾವರಿ ಯೋಜನೆ ಅಡಿಯಲ್ಲಿ ಬರುವ ಬೋರಿ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ 10 ಕೆರೆಗಳು ಹಾಗೂ ಆಳಂದ ತಾಲ್ಲೂಕಿನ 3 ಕೆರೆಗಳು ಸಹಿತ ಅಮರ್ಜಾ ಜಲಾಶಯ ತುಂಬಿಸುವ ಯೋಜನೆ | ಸದರಿ ಕಾಮಗಾರಿಯ ಜಾಕವೆಲ್ / ಪಂಪ್ ಹೌಸ್ ಬಳ್ಳೂಂಡಗಿ ಗ್ರಾಮದ ಹತ್ತಿರ ಬೋರಿ ನದಿಯ ದಡದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಕರಾರು ಮೊತ್ತ ರೂ.318.48 ಕೋಟಿ<br>ವೆಚ್ಚ ರೂ.191.28 ಕೋಟಿ<br>ಡಿಸೆಂಬರ್-2023ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| 27. | ಕಲಬುರ್ಗಿ | ಬಂದರವಾಡ ಮತ್ತು ಮಣ್ಣೂರ್ ಏತ ನೀರಾವರಿ ಯೋಜನೆ ಅಡಿಯಲ್ಲಿ ಬರುವ ಭೀಮಾ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ ಬಂದರವಾಡ ಲಿಫ್ಟಿನ 3 ಕೆರೆಗಳು ಹಾಗೂ ಮಣ್ಣೂರ್ ಲಿಫ್ಟಿನ 4 ಕೆರೆಗಳು ತುಂಬಿಸುವ ಯೋಜನೆ | ಭೀಮಾ ನದಿಯಿಂದ ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ 7 ಕೆರೆಗಳು ಹಾಗೂ ತುಂಬಿಸುವ ಯೋಜನೆಯಾಗಿದ್ದು, ಸದರಿ ಕಾಮಗಾರಿಯ ಜಾಕವೆಲ್ / ಪಂಪ್ ಹೌಸ್ ಬಂದರವಾಡ ಹಾಗೂ ಮಣ್ಣೂರ್ ಗ್ರಾಮದ ಹತ್ತಿರ ಭೀಮಾ ನದಿಯ ದಂಡದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಕರಾರು ಮೊತ್ತ ರೂ.51.40 ಕೋಟಿ<br>ವೆಚ್ಚ ರೂ.9.40 ಕೋಟಿ<br><br>ಡಿಸೆಂಬರ್-2023ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| 28. | ಕಲಬುರ್ಗಿ | ಕೆಳದಂಡೆ ಮುಲ್ಲಾಮಾರಿ ಯೋಜನೆಯ | ಮೂಲ ಯೋಜನೆ ಪೂರ್ಣಗೊಂಡಿದೆ.<br>ಸದರಿ ಯೋಜನೆಯ ಕಾಲುವೆ ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br><br>ಕರಾರು ಮೊತ್ತ ರೂ.124.77 ಕೋಟಿ<br>ವೆಚ್ಚ ರೂ.90.66 ಕೋಟಿ<br>ಡಿಸೆಂಬರ್-2023ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| 29. | ಕಲಬುರ್ಗಿ | ಚಂದ್ರಂಪಳ್ಳಿ ನೀರಾವರಿ ಯೋಜನೆ | ಮೂಲ ಯೋಜನೆ ಪೂರ್ಣಗೊಂಡಿದೆ |
| 30. | ಕಲಬುರ್ಗಿ | ಭೀಮಾ ಏತ ನೀರಾವರಿ ಯೋಜನೆ. | ಮೂಲ ಯೋಜನೆ ಪೂರ್ಣಗೊಂಡಿದೆ. |
| 31. | ಕಲಬುರ್ಗಿ | ಬೆಣ್ಣೆತೋರಾ ಯೋಜನೆಯ | ಮೂಲ ಯೋಜನೆ ಪೂರ್ಣಗೊಂಡಿದೆ.<br>ಸದರಿ ಯೋಜನೆಯ ಕಾಲುವೆ ಆಧುನೀಕರಣ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ.<br>ಕರಾರು ಮೊತ್ತ ರೂ.174.15 ಕೋಟಿ<br><br>ವೆಚ್ಚ ರೂ.151.13 ಕೋಟಿ |

| ಕ್ರಮ ಸಂ. | ಜಿಲ್ಲೆ | ಯೋಜನೆ | ಪ್ರಸ್ತುತ ಹಂತ |
|---|---|---|---|
| 32. | ಕಲಬುರ್ಗಿ | ಅಮರ್ಜಾ | ಮೂಲ ಯೋಜನೆ ಪೂರ್ಣಗೊಂಡಿದೆ. |
| 33. | ಕಲಬುರ್ಗಿ | ಗಂಡೋರಿನಾಲಾ ಯೋಜನೆ | ಮೂಲ ಯೋಜನೆ ಪೂರ್ಣಗೊಂಡಿದೆ.<br>ಸದರಿ ಯೋಜನೆಯ ಕಾಲುವೆ ಆಧುನೀಕರಣ ಕಾಮಗಾರಿಗಳು ಪೂರ್ಣಗೊಂಡಿವೆ.<br>ಕರಾರು ಮೊತ್ತ ರೂ.97.74 ಕೋಟಿ<br>ವೆಚ್ಚ ರೂ.95.96 ಕೋಟಿ |
| 34. | ಕಲಬುರಗಿ | ಎಡಳ್ಳಿ ಮತ್ತು ತೇರನಳ್ಳಿ ಏತ ನೀರಾವರಿ ಯೋಜನೆ | ಟೆಂಡರ್ ಹಂತದಲ್ಲಿದೆ. |

******

ವ್ಯವಸ್ಥಾಪಕ ನಿರ್ದೇಶಕರು ಪರವಾಗಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ಬೆಂಗಳೂರು